**ವ್ಯಾಖ್ಯಾನ**

# <u>ಕಣ್ಣಲ್ಲಿ ನೀರಿಲ್ಲ ಮನದೊಳಕ್ಕರವಿಲ್ಲ</u>

**Ref.**: From Rao's website.

**ಕಣ್ಣಲ್ಲಿ ನೀರಿಲ್ಲ ಮನದೊಳಕ್ಕರವಿಲ್ಲ**
**ಅತ್ತೆ ಸತ್ತರೆ ಸೊಸೆ ಅಳುವಂತೆ ನಾ ಅತ್ತೆ**
**ಅತ್ತೆ ಅತ್ತೆ ಎಂತೆಂದು ನಾನತ್ತೆ**
**ಅತ್ತೆ ಸತ್ತರೆ ಎದೆ ಎರಡೂ ಪರಿಯಾಯಿತೆಂದು**
**ಅತ್ತೆ ಅತ್ತೆ ಎಂದು ಅತ್ತೆ ಪುರಂದರ ವಿಠಲನ**
**ದಾಸರೆಲ್ಲರ ಮುಂದೆ ಹಾಡಿ ಹಾಡಿ ನಾನತ್ತೆ**

**ಲೌಕಿಕ ಅರ್ಥ :**

ಈ ಉಗಾಭೋಗವು ಸಮಾಜದಲ್ಲಿಯ ಅತ್ತೆ ಮತ್ತು ಸೊಸೆಯರ ಮನಸ್ಸಿನ ಭೇದ ತೋರಿಸುವದು. ಹಳೆಯ ಗಾದೆಯಂತೆ ಎರಡೂ ಜುಟ್ಟು ಕೂಡಿ ಇರುತ್ತವೆ ಆದರೆ ಎರಡೂ ಜಡೆ ಕೂಡಿ ಇರುವದು ಬಹಳ ವಿರಳ. ಸ್ತ್ರೀಯು ಯಾವದೇ ವಿಷಯವನ್ನು ಆಳವಾಗಿ ವಿಚಾರಿಸುತ್ತಾಳೆ. ತಾನೇ ಶ್ರೇಷ್ಠ ಎಂಬ ಅಹಂಕಾರ ಮೊದಲಿನಿಂದಲೂ ಇದೆ. ದಾಸರು ಈ ಉಗಾಭೋಗದಲ್ಲಿ ಅತ್ತೆ ಸೊಸೆಯರ ಸಂಬಂಧದ ಬಗ್ಗೆ ಹೇಳುವರು. ಮನೆಯಲ್ಲಿ ಎಲ್ಲವನ್ನು ಅತ್ತೆಯೇ ನಿಭಾಯಿಸುತ್ತಿದ್ದರೆ ಸೊಸೆಗೆ ತನಗೆ ಯಾವ ವಿಷಯ ನಿರ್ಧಾರಕ್ಕೆ ಅವಕಾಶ ಇಲ್ಲ ಎಂದು ಕೋಪಗೊಳ್ಳುವ ಪ್ರಸಂಗ ಬರುತ್ತವೆ. ಹೀಗೆ ಬಹಳ ದಿನ ಕಳೆದಾಗ ಸೊಸೆಗೆ ಅತ್ತೆಯ ಮೇಲಿನ ಗೌರವ ಪ್ರೀತಿ ಕಡಿಮೆಯಾಗಿ ಕ್ರಮೇಣ ಇಲ್ಲದಂತಾಗುವದು. ಕೊನೆಗೊಂದು ದಿನ ಅತ್ತೆ ಸತ್ತಾಗ ಸೊಸೆಯೂ ಸಮಾಜದ ಜನರಿಗೆ ತೋರಿಸಲು ಅತ್ತೆ ಅತ್ತೆ ಎಂದುಗೋಳು ತೋಡಿ ಅಳುವಳು. ಆದರೆ ಅವಳಿಗೆ ಅಂತರಂಗದಲ್ಲಿ ಅತ್ತೆಯ ಬಗ್ಗೆ ಪ್ರೀತಿ ಇರುವದಿಲ್ಲ. ಜನ ನೋಡಿ ಪಾಪ ಅನ್ನುವರು. ಅತ್ತೆ ಸತ್ತಾಗ ಸೊಸೆಯ ಎದೆ ಎರಡು ಬಗೆ ಆಯಿತು ಎಂದು ದಾಸರು ಹೇಳಿದ್ದಾರೆ. ಒಂದೆಡೆ ದುಃಖ ಇನ್ನೊಂದೆಡೆ ಸಂತೋಷ. ಹೀಗೆ ಅತ್ತೆ ಅತ್ತೆ ಎಂದು ಒದರುತ್ತಾ ಅತ್ತು ಪುರಂದರ ವಿಠಲನ ದಾಸರ ಮುಂದೆಯೂ ಅಳುತ್ತ ಅಳುವಳು ಅದನ್ನು ನೋಡಿ ನಾ ಎಂಬ ವ್ಯಕ್ತಿಯೂ ಅತ್ತನು.

**ಆಧ್ಯಾತ್ಮಿಕ ಅರ್ಥ :**

ಮೇಲಿನ ಲೌಕಿಕ ಅರ್ಥದಿಂದ ನಾಸ್ತಿಕ ಜನರಿಗೆ ಹಾಸ್ಯ ವೆನಿಸುವದು ಸಹಜ. ಆದರೆ ದಾಸರು ಹೇಳಿದ ದೃಷ್ಟಿಯನ್ನು ವಿಶ್ಲೇಷಿಸಿ ನೋಡಿದರೆ ಆಸ್ತಿಕ ಮನೋಭಾವ ಇದ್ದವರಿಗೆ ನಿಜವಾಗಿ ಆಶ್ಚರ್ಯ ಆಗುವದು.

ಇಲ್ಲಿ ಮನೆ ಎಂದರೆ ನಮ್ಮ ಜಡ ದೇಹ. ಅದರಲ್ಲಿ ಮನಸ್ಸು ರಾಜ, ಅಧಿಕಾರಿ ಅಥವಾ ಹಳೆಯ ಅವಿಭಕ್ತ ಕುಟುಂಬದ ಹಿರಿಯಳಾದ ಅತ್ತೆ. ಈ ಮನಸ್ಸು ಎಂಬ ಅತ್ತೆಯು, ಇಂದ್ರಿಯಗಳೆಂಬ ಸೊಸೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು, ಇಂದ್ರಿಯ ನಿಗ್ರಹ ಮಾಡಿರುತ್ತಾರೆ. ಹೀಗಾಗಿ ಇಂದ್ರಿಯಗಳಿಗೆ ಈ ಮನಸ್ಸು ತಮ್ಮ ಮಾತೂ ಕೇಳುವದಿಲ್ಲವೆಂದು ಅವಳೂ ಇದ್ದರೂ ಸತ್ತಂತೆ ಎಂಬ ಭಾವನೆ ಮುದಿರುತ್ತದೆ. ಮನಸ್ಸಿನ ಬಗ್ಗೆ ಪ್ರೀತಿ ಇರುವದಿಲ್ಲ. ಇದ್ದರೂ ಸತ್ತಂತೆ ಇದ್ದ ಮನಸ್ಸಿನ ಬಗ್ಗೆ ಇಂದ್ರಿಯಗಳು ರೋದಿಸುತ್ತವೆ. ಇಲ್ಲಿ ದಾಸರು ನಾ ಎಂಬ ಶಬ್ದವನ್ನು ಅಹಂಕಾರ, ಮಮಕಾರಕ್ಕೆ ಸಂಭೋಧಿಸಿದ್ದಾರೆ. ಅವೆರಡು ಇಂದ್ರಿಯಗಳು ಒಂದೇ ತತ್ವ ಹೊಂದಿರುತ್ತವೆ. ಇಂಥ ಇಂದ್ರಿಯ ನಿಗ್ರಹಿ ಅತ್ತೆ ಎಂಬ ಮನಸ್ಸು ಯಾವಾಗಲೂ ಇಂದ್ರಿಯಗಳನ್ನು ಪರಮಾತ್ಮನ ನಾಮಸ್ಮರಣೆ, ಭಜನೆ, ಕೀರ್ತನೆ, ದಾನ, ಧರ್ಮಕ್ಕೆ ಉಪಯೋಗಿಸುತ್ತದೆ. ಇದರಿಂದಾಗಿ ಇಂದ್ರಿಯಗಳು ಉಪಾಯವಿಲ್ಲದೆ ಲೌಕಿಕದ ಕಡೆಗೆ ಮನಸ್ಸನ್ನು ಜಗ್ಗಬೇಕೋ, ಅಥವಾ ಮನಸ್ಸೇ ಹೇಳಿದಂತೆ ಕೇಳಬೇಕೋ ಎಂದು ಎರಡು ದಿಕ್ಕಿನಲ್ಲಿ ವಿಚಾರಿಸಿಕೊಳ್ಳುತ್ತವೆ. ಧಾರ್ಮಿಕ ದಿಕ್ಕಿನತ್ತ ತಿರುಗಿದ ಮನಸ್ಸು ತಮ್ಮ ಪಾಲಿಗೆ ಸತ್ತಿದೆ ಎಂದು ಇಂದ್ರಿಯಗಳು ಅತ್ತು ಪುರಂದರ ವಿಠಲ ನಾಮಕ ಪರಮಾತ್ಮನ ದಾಸರಾದ ಸಜ್ಜನರ ಮುಂದೆಯೂ ಅತ್ತೆಯಾದ ಮನಸ್ಸು ಹೇಳಿದಂತೆ ಹಾಡು ಹಾಡುತ್ತವೆ.

**ಶ್ರೀ ಕೃಷ್ಣಾರ್ಪಣಮಸ್ತು**